ಪ್ರಶ್ನೆಪತ್ರಿಕೆ ಕ್ರಮ ಸಂಖ್ಯೆ :
Q.P. Sl. No. :

ಮೇ 2026 ರ ಪರೀಕ್ಷೆ–2
MAY 2026 EXAMINATION-2

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12]
Total No. of Printed Pages : 12]

ಒಟ್ಟು ಪ್ರಶ್ನೆಗಳ ಸಂಖ್ಯೆ : 38]
Total No. of Questions : 38]

A

CCE RF/RR/ PF/PR

ಸಂಕೇತ ಸಂಖ್ಯೆ : 85-K **Code No. : 85-K**

ವಿಷಯ : ಸಮಾಜ ವಿಜ್ಞಾನ

Subject : SOCIAL SCIENCE

(ಕನ್ನಡ ಮಾಧ್ಯಮ / Kannada Medium)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

(Regular Fresh / Regular Repeater / Private Fresh / Private Repeater)

ದಿನಾಂಕ : 02. 04. 2026] [Date : 02. 04. 2026

ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-15 ರವರೆಗೆ] [Time : 10-00 A.M. to 1-15 P.M.

ಗರಿಷ್ಠ ಅಂಕಗಳು : 80] [Max. Marks : 80

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ). ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Cut here/ಇಲ್ಲಿ ಕತ್ತರಿಸಿ

Tear here/ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER WITH REVERSE JACKET
ಹಿಮ್ಮುಖ ಜಾಕೆಟ್ ಹೊಂದಿರುವ ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

85-K 10/301

Tear here/ಇಲ್ಲಿಂದ ಕತ್ತರಿಸಿ

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : **8 × 1 = 8**

1. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್

(A) ವಿಲಿಯಂ ಬೆಂಟಿಂಕ್

(B) ಕಾರ್ನ್‌ವಾಲೀಸ್

(C) ಆರ್.ಎಂ. ಬರ್ಡ್

(D) ಅಲೆಕ್ಸಾಂಡರ್ ರೀಡ್

2. 1942 ರ ಸ್ಟಾಲಿನ್‌ಗ್ರಾಡ್ ಯುದ್ಧದಲ್ಲಿ ಜರ್ಮನ್ ಪಡೆಗಳನ್ನು ಸೋಲಿಸಿದ ದೇಶ

(A) ಬ್ರಿಟನ್

(B) ಫ್ರಾನ್ಸ್

(C) ರಷ್ಯಾ

(D) ಅಮೆರಿಕಾ ಸಂಯುಕ್ತ ಸಂಸ್ಥಾನ

85-K 10/301

3. ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘದ (ಸಾರ್ಕ್) ಮುಖ್ಯ ಕಛೇರಿ ಇರುವುದು

(A) ದೆಹಲಿಯಲ್ಲಿ

(B) ಜಿನೇವಾದಲ್ಲಿ

(C) ನ್ಯೂಯಾರ್ಕಿನಲ್ಲಿ

(D) ಕಠ್ಮಂಡುವಿನಲ್ಲಿ

4. ಕರ್ನಾಟಕದಲ್ಲಿ ಜೀತ ಪದ್ಧತಿಯನ್ನು ರದ್ದುಗೊಳಿಸಿದವರು

(A) ಪ್ರೊ ಎಂ. ಡಿ. ನಂಜುಂಡಸ್ವಾಮಿ

(B) ಡಿ. ದೇವರಾಜ ಅರಸು

(C) ಡಾ. ಶಿವರಾಮ ಕಾರಂತ

(D) ಬಾಬಾ ಆಮ್ಟೆ

85-K 10/301

5. ಭಾರತದ ಪ್ರಾದೇಶಿಕ ಮತ್ತು ಸ್ವತಂತ್ರ ಜಿ.ಪಿ.ಎಸ್. ವ್ಯವಸ್ಥೆಯ ಹೆಸರು

(A) ನಾವಿಕ್

(B) ಆರ್ಕ್‌ಇನ್ಫೋ

(C) ಆಟೋಕ್ಯಾಡ್

(D) ಮ್ಯಾಪ್‌ಇನ್ಫೋ

6. ಮುಂಬೈ ಅನ್ನು 'ಭಾರತದ ಮ್ಯಾಂಚೆಸ್ಟರ್' ಎಂದು ಕರೆಯಲಾಗುತ್ತದೆ. ಏಕೆಂದರೆ,

(A) ಇಲ್ಲಿ ಹೆಚ್ಚು ಕಾಗದದ ಕೈಗಾರಿಕೆಗಳಿವೆ

(B) ಇಲ್ಲಿ ಹೆಚ್ಚು ಸಕ್ಕರೆ ಕೈಗಾರಿಕೆಗಳಿವೆ

(C) ಇಲ್ಲಿ ಹೆಚ್ಚು ಅಲ್ಯೂಮಿನಿಯಂ ಕೈಗಾರಿಕೆಗಳಿವೆ

(D) ಇಲ್ಲಿ ಹೆಚ್ಚು ಹತ್ತಿ ಬಟ್ಟೆ ಕೈಗಾರಿಕೆಗಳಿವೆ

85-K 10/301

7. ಪ್ರತ್ಯಕ್ಷ ತೆರಿಗೆಗೆ ಉದಾಹರಣೆ

(A) ಸರಕು ಮತ್ತು ಸೇವಾ ತೆರಿಗೆ

(B) ವಿದೇಶೀ ಪ್ರವಾಸಿಗರ ಮೇಲಿನ ತೆರಿಗೆ

(C) ಕಂಪನಿ ತೆರಿಗೆ

(D) ಆಮದು-ರಫ್ತು ಸುಂಕಗಳು

8. ರಾಜು ಒಬ್ಬ ವಿದ್ಯಾರ್ಥಿಯಾಗಿದ್ದು, ಆತನು ಬ್ಯಾಂಕಿನಲ್ಲಿ ಒಂದು ಖಾತೆಯನ್ನು ತೆರೆಯಲು ಬಯಸಿದ್ದಾನೆ. ಆತನಿಗೆ ಸೂಕ್ತವಾದ ಬ್ಯಾಂಕ್ ಖಾತೆಯೆಂದರೆ,

(A) ಉಳಿತಾಯ ಖಾತೆ

(B) ಚಾಲ್ತಿ ಖಾತೆ

(C) ಆವರ್ತ ಠೇವಣಿ ಖಾತೆ

(D) ನಿಶ್ಚಿತ ಠೇವಣಿ ಖಾತೆ

10/301 85-K

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **8 × 1 = 8**

9. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗಳನ್ನು ಪ್ರಾರಂಭಿಸಿದವರು ಯಾರು ?

10. ಎರಡನೆಯ ಮಹಾಯುದ್ಧವು ಶೀತಲ ಸಮರಕ್ಕೆ ನಾಂದಿಯಾಯಿತು. ಹೇಗೆ ?

11. ದತ್ತಿ ಸಮಿತಿಯನ್ನು ಸ್ಥಾಪಿಸಲು ಕಾರಣವೇನು ?

12. ಎಂ.ಆರ್.ಪಿ.ಎಲ್. ವಿರೋಧಿ ಚಳವಳಿಯನ್ನು ಏಕೆ ಹಮ್ಮಿಕೊಳ್ಳಲಾಯಿತು ?

13. ಬೇಸಿಗೆಯಲ್ಲಿ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಉಷ್ಣಾಂಶ ಕಡಿಮೆಯಿರುತ್ತದೆ. ಏಕೆ ?

14. ಸುವರ್ಣ ಗ್ರಾಮೋದಯ ಯೋಜನೆಯನ್ನು ಏಕೆ ಜಾರಿಗೆ ತರಲಾಗಿದೆ ?

15. ಭಾರತದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಯಾವ ವರ್ಷದಲ್ಲಿ ಸ್ಥಾಪಿಸಲಾಯಿತು ?

16. ಭಾರತ ಸಂವಿಧಾನದ 17ನೇ ವಿಧಿಯ ಮಹತ್ವವೇನು ?

85-K 10/301

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : **8 × 2 = 16**

17. ಕೇಂದ್ರ ಲೋಕಸೇವಾ ಆಯೋಗದ ರಚನೆಯನ್ನು ವಿವರಿಸಿ.

ಅಥವಾ

ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ರಚನೆಯನ್ನು ವಿವರಿಸಿ.

18. "ವರದಕ್ಷಿಣೆಯು ಸಮಾಜದಲ್ಲಿ ಲಿಂಗ ಅಸಮಾನತೆಯನ್ನು ಉಂಟು ಮಾಡುತ್ತದೆ." ಸಮರ್ಥಿಸಿ.

ಅಥವಾ

ತಾರತಮ್ಯದಿಂದ ರೂಪುಗೊಂಡ ಪೂರ್ವಾಗ್ರಹವು ಋಣಾತ್ಮಕ ಭಾವನೆಗಳಿಗೆ ಕಾರಣವಾಗುತ್ತದೆ. ಸಮರ್ಥಿಸಿ.

19. ಸ್ವಾತಂತ್ರ್ಯಾನಂತರದಲ್ಲಿ ಭಾರತವು ಎದುರಿಸಿದ ಸಮಸ್ಯೆಗಳು ಯಾವುವು ?

20. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯು ಭಾರತದಲ್ಲಿ ಬ್ರಿಟಿಷ್ ಅಧಿಕಾರದ ವಿಸ್ತರಣೆಗೆ ಸಹಾಯಕವಾಯಿತು. ಸಮರ್ಥಿಸಿ.

21. ಮಳೆಕೊಯ್ಲಿನ ಪ್ರಾಮುಖ್ಯತೆಯನ್ನು ವಿವರಿಸಿ.

10/301 85-K

22. ತೋಟಗಾರಿಕೆ ಮತ್ತು ಪುಷ್ಪ ಬೇಸಾಯಗಳು ಭಾರತೀಯ ರೈತರ ಅಭಿವೃದ್ಧಿಗೆ ಸಹಾಯ ಮಾಡಿವೆ. ಸಮರ್ಥಿಸಿ.

23. ನೀತಿ ಆಯೋಗದ ಧ್ಯೇಯೋದ್ದೇಶಗಳನ್ನು ವಿವರಿಸಿ.

24. ಪ್ರತಿ ವರ್ಷವು ಮಾರ್ಚ್ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಏಕೆ ?

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : **9 × 3 = 27**

25. ಬಕ್ಸಾರ್ ಕದನದ ಪರಿಣಾಮಗಳನ್ನು ವಿವರಿಸಿ.

ಅಥವಾ

ಭಾರತದಲ್ಲಿ ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಬೀರಿದ ಪರಿಣಾಮಗಳನ್ನು ವಿವರಿಸಿ.

26. ಭಾರತದಲ್ಲಿ ಕಂಡುಬರುವ ಅರಣ್ಯಗಳ ಪ್ರಕಾರಗಳು ಯಾವುವು ?

ಅಥವಾ

ಭಾರತದ ಪಶ್ಚಿಮ ಕರಾವಳಿಯ ಪ್ರಮುಖ ಬಂದರುಗಳು ಯಾವುವು ?

85-K 10/301

27. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ. ದೃಢೀಕರಿಸಿ.

ಅಥವಾ

ಸಾರ್ವಜನಿಕ ಹಣಕಾಸು ವೈಯಕ್ತಿಕ ಹಣಕಾಸಿಗಿಂತ ಭಿನ್ನವಾಗಿದೆ. ದೃಢೀಕರಿಸಿ.

28. ಅಂಚೆ ಕಛೇರಿಗಳು ನಿರ್ವಹಿಸುವ ಹಣಕಾಸಿನ ವ್ಯವಹಾರಗಳನ್ನು ವಿವರಿಸಿ.

ಅಥವಾ

ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರವನ್ನು ವಿವರಿಸಿ.

29. ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಜಾರಿಗೆ ತಂದ ಸುಧಾರಣಾ ಕಾರ್ಯಗಳಾವುವು ?

30. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳನ್ನು ವಿವರಿಸಿ.

31. "ಭಯೋತ್ಪಾದನೆಯು ಜಾಗತಿಕ ಭದ್ರತೆಗೆ ಆತಂಕಕಾರಿಯಾಗಿದೆ." ಹೇಗೆ ?

32. ಸಂಘಟಿತ ವಲಯದ ದುಡಿಮೆಗಾರರ ಲಕ್ಷಣಗಳನ್ನು ವಿವರಿಸಿ.

33. "ಭೂಕಂಪಗಳು ಅತ್ಯಂತ ವಿನಾಶಕಾರಿಯಾಗಿವೆ." ಈ ಹೇಳಿಕೆಯನ್ನು ಸಮರ್ಥಿಸಿ.

85-K 10/301

V. **ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

4 × 4 = 16

34. "ಬ್ರಿಟಿಷರ ಆಳ್ವಿಕೆಯ ವಿರುದ್ಧ ಹಲಗಲಿ ಬೇಡರ ಪ್ರತಿಭಟನೆಯು ಒಂದು ಪ್ರಮುಖ ಸಶಸ್ತ್ರ ದಂಗೆಯಾಗಿತ್ತು." ಹೇಗೆ ?

ಅಥವಾ

ಸ್ವಾಮಿ ದಯಾನಂದ ಸರಸ್ವತಿಯವರ ಕೊಡುಗೆಗಳನ್ನು ವಿಶ್ಲೇಷಿಸಿ.

35. ಮಣ್ಣಿನ ಸವೆತವನ್ನು ತಡೆಗಟ್ಟುವ ವಿಧಾನಗಳನ್ನು ತಿಳಿಸಿ.

ಅಥವಾ

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ತಿಳಿಸಿ.

36. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವನ್ನು ತಿಳಿಸಿ.

37. ಆರ್ಥಿಕ ಅಸಮಾನತೆಯನ್ನು ನಿವಾರಿಸಲು ಅಗತ್ಯವಾಗಿರುವ ಕ್ರಮಗಳನ್ನು ವಿವರಿಸಿ.

VI. 38. **ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ ಐದನ್ನು ಗುರುತಿಸಿ :**

5 × 1 = 5

a) ಕರ್ಕಾಟಕ ಸಂಕ್ರಾಂತಿ ವೃತ್ತ

b) ಮಲಬಾರ್ ತೀರ

c) ಭಾಕ್ರಾ-ನಂಗಲ್ ಅಣೆಕಟ್ಟು

85-K 10/301

d) ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

e) ಭದ್ರಾವತಿ

f) ಕಲ್ಪಾಕ್ಕಂ

g) ಬಾಂಬೆ ಹೈ

h) ಕೊಯ್ನಾ

i) ದುರ್ಗಾಪುರ

j) ಶಿಲ್ಲಾಂಗ್

ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳೇನು ?

ಅಥವಾ

ಹಿಮಾಲಯ ಪರ್ವತಗಳ ಪ್ರಯೋಜನಗಳೇನು ? **5**

85-K 10/301

DO NOT WRITE ANYTHING HERE